Scheme for Irrigating Kumsi and Harnahalli Hobles of Shimoga Taluk.

422 SRI S.M. SHEERANALY CHANDARSEKHAR (Hosanagar)— Will the Minister for Minor Irrigation be pleased to state —

( ) whether there is any proposal before the Government to irrigate Kumsi and Harnahalli Hobles of Shimoga talak by digging thirty borewells each and lifting the water to tanks for irrigation purposes in that area ;

(*b*) if so, when the Government propose to commence the work?

SRI D. B. CHANDREGOWDA (Minister for Minor Irrigation).—

(*a*) Yes. The proposal is under investigation.

(*b*) Does not arise in view of reply to (*a*).

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ನನ್ನ 'ಅ' ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ನೋಡಿ ನಿರಾಶೆಯಾಗಿದೆ. ನಮ್ಮ ಶಿವಮೊಗ್ಗ ಜಿಲ್ಲೆಗೆ ತಾವು ಪ್ರವಾಸ ಬಂದಾಗ ಈ ಬಂದೀಗಲೇ ತೆಗೆದು ಕೊಳ್ಳಿ ಎಂದು ಆಜ್ಞೆ ಮಾಡಿದ್ದೀರಿ. ಒಂದು ಸಮಾರಂಭದಲ್ಲಿ ತಾವು ಈ ಮಾತನ್ನು ಹೇಳಿದ್ದಿರಿ. ಲಾಬುಬಲ್ಲಿ ಇದರ ಬಗ್ಗೆ ಮಾತನಾಡಿಕೊಂಡಾಗ ಈ ವರ್ಷ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಿರಿ, ಆದರೆ ಈಗ ಈ ರೀತಿ ಉತ್ತರ ಕೊಟ್ಟಿದ್ದೀರಿ?

† ಶ್ರೀ ಡಿ. ಬಿ. ಚಂದ್ರೇಗೌಡ.— ಇದು ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿದೆ; ಒಪಿನಿಯನ್ ಬಂದಿಲ್ಲ, ಇದು ಫೀಸಿಬಲ್ಲಾಗಿದೆ ಎಂದು ಒಪಿನಿಯನ್ ಬಂದರೆ ಇದನ್ನು ತೆಗೆದುಕೊಳ್ಳುವ ವಿಚಾರವನ್ನು ಪರಿಶೀಲಿಸಬಹುದು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಜಿಯಾಲಜಿಕಲ್ ಸರ್ವೆ ಒಂದೆರಡು ವರ್ಷಗಳಿಂದ ನಡೆಯುತ್ತಾ ಇದೆ ಈ ಸರ್ವೆ ಯಾವಾಗ ಅಂತ್ಯವಾಗುತ್ತದೆ, ಯಾವಾಗ ರಿಪೋರ್ಟ್ ಕೊಡುತ್ತಾರೆ, ಯಾವಾಗ ಕಾರ್ಯಗತ ಮಾಡುತ್ತೀರಿ? ಜನಕ್ಕೆ ಯಾವಾಗ ನೀರು ಉಣಿಸುತ್ತೀರಿ?

ಶ್ರೀ ಡಿ. ಬಿ. ಚಂದ್ರೇಗೌಡ.— ಈಗಾಗಲೇ ಕೆಲವು ಭಾಗವನ್ನು ಸರ್ವೆ ಮಾಡಿದ್ದಾರೆ. ಇನ್ನು ಕೆಲವು ಭಾಗಗಳನ್ನು ಸರ್ವೆ ಮಾಡುತ್ತಿದ್ದಾರೆ. ಇದರಲ್ಲಿ ಒಂದೇ ಪ್ರಶ್ನೆಯಲ್ಲಿ ಎರಡು ರೀತಿಯ ಉತ್ತರಗಳಿವೆ. ಒಂದನೆಯದು ಎಂದರೆ, ಇರತಕ್ಕಂಥ ಟ್ಯಾಂಕುಗಳ ಕೆಳಗಡೆ ಭೂಗರ್ಭದಲ್ಲಿರತಕ್ಕಂತ ನೀರನ್ನು ತೆಗೆಯಹತಕ್ಕಂಥದ್ದು ಎರಡನೆಯದು ಅಂದರೆ, ನೇರವಾಗಿ ಭೂಮಿಯಿಂದ ನೀರನ್ನು ತೆಗೆದು ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳುವಂಥಾದ್ದು, ಇದರಲ್ಲಿ ಯಾವುದು ಸರಿ ಎನ್ನುವುದನ್ನು ಇನ್ನೂ ನಿರ್ಧರಿಸಬೇಕಾಗಿದೆ, ಎಷ್ಟು ಪೂರೈಸುತ್ತೇವೆ, ಯಾವಾಗ ಪೂರೈಸುತ್ತೇವೆ ಎಂದು ಹೇಳುವುದು ಕಷ್ಟವಾಗುತ್ತದೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಖಚಿತವಾಗಿ ಇಂತಿಷ್ಟೇ ದಿವಸವಾಗುತ್ತದೆ ಎಂದು ತಿಳಿಸುವುದಕ್ಕೆ ಆಗುವುದಿಲ್ಲವೆ. ಈ ಸರ್ವೆ ೨-೩ ವರ್ಷಗಳ ಮೇಲೆ ಆಗುತ್ತದೆ. ನಾನು ಈ ಬಗ್ಗೆ ಕಳೆದ ಶಾಸನಸಭೆಯಲ್ಲಿ ಪ್ರಶ್ನೆಗಳನ್ನು ಹಾಕಿ, ಸಲಹೆಗಳನ್ನು ಹಾಕಿ ಕಸರತ್ತು ಮಾಡಿದ್ದೇನೆ, ಸರ್ವೆ ಯಾವಾಗ ಮುಗಿಯುತ್ತದೆ, ಯಾವಾಗ ಕಾರ್ಯಗತ ಮಾಡುತ್ತೀರಿ ಎನ್ನುವುದನ್ನು ಖಚಿತವಾಗಿ ತಿಳಿಸುವುದಕ್ಕೆ ಆಗುತ್ತದೆಯೇ?

ಶ್ರೀ ಡಿ. ಬಿ. ಚಂದ್ರೇಗೌಡ.— ಈಗಾಗಲೇ ೧೨ ಕೆರೆಗಳನ್ನು ಸರ್ವೆ ಮಾಡಿದ್ದಾರೆ. ೧೧೫೦ ಎಕರೆ ಭೂಮಿಯನ್ನು ಇದರ ವ್ಯಾಪ್ತಿಗೆ ತರಬಹುದು ಎಂದು ಹೇಳಿದ್ದಾರೆ. ಇದಕ್ಕಾಗಿ ಸುಮಾರು ೬ ಲಕ್ಷ ೫೦ ಸಾವಿರ ರೂಪಾಯಿಗಳ ಅಂದಾಜು ತಯಾರು ಮಾಡಿದ್ದಾರೆ. ಒಂದು ಎಕರೆಗೆ ತಾಲೂಕಿಗೆ ಹೆಚ್ಚು ಅಂದರೆ, ಭೂಮಿಯಿಂದ ನೀರನ್ನು ತೆಗೆಯುತಕ್ಕ ಹೆಚ್ಚು ದುಬಾರಿಯಾದೀತು. ಆದುದರಿಂದ ಕೆಳಗಡೆಯಿಂದ ನೀರಾಗಿ ನೀರನ್ನು ತೆಗೆದು ಒದಗಿಸಬೇಕು ಎಂದು ಸರ್ಕಾರ ಯೋಚನೆ ಇದೆ. ಮತ್ತು ಹೀಗೆ ತೆರೆದಂಥ ನೀರು ಅವಿಯಾಗಿ ಎಷ್ಟವಾಗುವುದಕ್ಕೆ ಅವಕಾಶ ಕೊಡಬಾರದು ಎನ್ನುವುದು ಸರ್ಕಾರದ ಉದ್ದೇಶ.

ಶ್ರೀ ಬಿ. ಬಸವಣ್ಣಪ್ಪ :—ಪ್ರತಿ ಜಿಲ್ಲೆಯಲ್ಲೂ ಸಹ ಈ ತರಹದ ಬೆಲ್ಟ್ ಏರಿಯಾ ಇದೆ. ಮುಳಿ ಹುಲ್ಲೇ ಅವಲಂಬಿಸಿಕೊಂಡಿರತಕ್ಕ ಪ್ರದೇಶ ಇಂಥ ಪ್ರದೇಶಗಳಲ್ಲಿ ಶಾಶ್ವತವಾಗಿ ನೀರಾವರಿ ಸೌಲಭ್ಯ ಗಳನ್ನು ಒದಗಿಸುವುದಕ್ಕೆ ಏನಾದರೂ ಸರ್ಕಾರದ ಮುಂದೆ ಕಾರ್ಯಕ್ರಮ ಏದೆಯೇ?

ಶ್ರೀ ಡಿ. ಬಿ. ಚಂದ್ರೇಗೌಡ .—ಇದು ಜನರಲ್ ಪ್ರಶ್ನೆ ಆಯಿತು ಆದಂದಿಂದ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಿಕೊಡುತೇನೆ.

ಶ್ರೀ ಎಸ್. ಎಂ. ಶಿವಪ್ಪಳಿ ಚುನ್ನಶೆಟ್ಟಿ :—ಮಂತ್ರಿಗಳು ಎಷ್ಟೆ ಹೆಚ್ಚಿಕೊಂಡೇ ಬಂದಿರುತ್ತಾರೆಂದು ಕಾಣುತ್ತದೆ ಹಿಡಿಮುಕೊಳ್ಳುವುದಕ್ಕೆ ಹೆಚ್ಚಿನ ಜಾಗವಿಲ್ಲದೆ ಹೊಗುತ್ತಿದ್ದಾರೆ, ಸ್ವಾಮಿ ನಾನು ಕೇಳುತ್ತಿರುವುದು ಉಚಿತವಾಗಿ, ಯಾವ ತಾರೀಖಿನಲ್ಲಿ ಅಲ್ಲಿ ಕಾರ್ಯವನ್ನು ಪ್ರಾರಂಭ ಮಾಡುತ್ತೀರಿ ಎನ್ನುವುದರ ಬಗ್ಗೆ ಸ್ಪೆಸಿಫಿಕ್ ಆನ್ಸರ್ ಕೇಳುತ್ತಿದ್ದೇನೆ

ಶ್ರೀ ಡಿ. ಬಿ. ಚಂದ್ರೇಗೌಡ :—ಪ್ರಾರಂಭ ಮಾಡುವ ಬಗ್ಗೆಯೇ ಇನ್ನೂ ತೀರ್ಮಾನವಾಗಿಲ್ಲದಿರುವಾಗ ಯಾವ ತಾರೀಖಿನಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳುವುದು ಇನ್ನೂ ಕಷ್ಟ.

Anthodaya Scheme

550. SRI B. H. LAKSHMANAIAH (Belur) :—Will the Minister of State for Information and Youth Services be pleased to state :—

(a) whether there is any proposal before the Government to take up "Anthodaya" Scheme a model scheme taken up by the Rajasthan Government to ensure minimum standards for the poorest among the poor in Karnataka State ;

(b) if so, when the scheme will be implemented ?

SRI K. H. SRINIVAS (Minister of State for information and Youth Services) .—

(a) As the present rural development programme of the State itself, is on the 'Anthodaya" model, there is no proposal to take up separately another "Anthodaya" Scheme on the model of Rajasthan.

(b) Does not arise.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ :—ಸ್ವಾಮಿ ತಾವು (ಅ) ಗೆ ಉತ್ತರವಲ್ಲಿ, ರಾಜ್ಯದಲ್ಲಿ ಈಗಿರುವ ಗ್ರಾಮಾಂತರ ಅಭಿವೃದ್ಧಿ ಕಾರ್ಯಕ್ರಮವು "ಅಂತ್ಯೋದಯ" ಮಾದರಿಯಲ್ಲಿದೆಯೆಂದು ಹೇಳಿದ್ದೀರಿ ಸ್ವಾತಂತ್ರ್ಯ ಬಂದು ೩೦ ವರ್ಷಗಳಿಂದಲೂ ಬಡತನ ಹೋಗುತ್ತಿದೆಯೆಂದು ಹೇಳತಕ್ಕದ್ದು ಸರ್ಕಾರದ ಒಂದು ಫ್ಯಾಷನ್ ಆಗಿದೆ. ಮತ್ತು ಎಷ್ಟು ಜನರ ಬಡತನವನ್ನು ಹೋಗಿಸಿದ್ದೀರಿ ಎನ್ನುವುದು ಗೊತ್ತಿಲ್ಲ. ರಾಜಾಸ್ಥಾನದಲ್ಲಿ ಹಾಕಿರುವ ಅಂತ್ಯೋದಯ ಯೋಜನೆಯಿಂದ ಇಷ್ಟು ವರ್ಷದಿಂದ ಇಷ್ಟು ಜನರ ಬಡತನವನ್ನು ಹೋಗಿಸಿದ್ದೇವೆಂದು ಅಂಕಿಅಂಶಗಳ ಸಮೇತವಾಗಿ ಹೇಳುತ್ತಿದ್ದಾರೆ. ತಾವು ಕರ್ನಾಟಕ ರಾಜ್ಯದಲ್ಲಿ ಬರೀ ಭಾಷಣದಲ್ಲಿ ಮತ್ತು ಅಸೆಂಬ್ಲಿಗಳಲ್ಲಿ ಬಡತನ ತೊಲಗಿಸುತ್ತಿದ್ದೇವೆ, ಬಡವರಿಗಾಗಿಯೇ ನಮ್ಮ ಸರ್ಕಾರ ಅವರಿಗೆ ಇಷ್ಟು ಖರ್ಚು ಮಾಡುತ್ತಿದ್ದೇವೆ, ಇಷ್ಟು ಖರ್ಚು ಮಾಡಿದ್ದೇವೆಂದು ಹೇಳುವುದರ ಬದಲು ಉಚಿತವಾಗಿ ಈ ರೀತಿ ಅಂತ್ಯೋದಯ ಕಾರ್ಯಕ್ರಮವನ್ನು ಹಾಕಿಕೊಂಡು ಬಡವರ ಆರ್ಥಿಕ ಪರಿಸ್ಥಿತಿಯನ್ನು ಹಿತಕ್ಕೆ ಉತ್ತಮ ಪಡಿಸಬೇರದೆಂದು ಕೇಳುತ್ತೇನೆ ಸ್ವಾಮಿ.

†ಶ್ರೀ ಕೆ. ಎಚ್. ಶ್ರೀನಿವಾಸ್ :—ಮಾನ್ಯ ಸಭಾಧ್ಯಕ್ಷರೆ, ರಾಜಾಸ್ಥಾನದಲ್ಲಿರತಕ್ಕ ಅಂತ್ಯೋದಯ ಯೋಜನೆ ಬಗೆ ಸದಸ್ಯರಿಗೆ ಎಷ್ಟರಮಟ್ಟಿಗೆ ತಿಳುವಳಿಕೆ ಇದಯೋ ನನಗಂತೂ ಗೊತ್ತಿಲ್ಲ. ಅದುದರಿಂದ ಅವರ ಅವಗಾಹನೆಗೆ ಒಂದು ವಿಷಯವನ್ನು ತರಬೇಕು ಎಂದರೆ ಬರೀ ಅದರ ಹೆಸರು ಅಂತ್ಯೋದಯ